ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್.1249/2023

| | | |
|---|---|---|
| ಸಾಕ್ಷಿಯ ಹೆಸರು | : ಬಾಬು | ಸಿ.ಡಬ್ಲ್ಯು 4 |
| ತಂದೆಯ ಹೆಸರು | : ಗೋವಿಂದಪ್ಪ | ಪಿ.ಡಬ್ಲ್ಯು 4 |
| ವಯಸ್ಸು | : 32 ವರ್ಷ | |
| ಉದ್ಯೋಗ | : ಪೋಲೀಸ್ ಪೇದೆ | |
| ವಾಸ ಸ್ಥಳ | : ತರೀಕೆರೆ | |

ದಿನಾಂಕ:11.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-

ನಾನು ಕಳೆದ 5 ವರ್ಷಗಳಿಂದ ತರೀಕೆರೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯೆಂದು ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ 10.06.2023 ರಂದು ಚಾಸ-1 ರವರು ಠಾಣೆಯಲ್ಲಿ ಇದ್ದಾಗ ಮದ್ಯಾಹ್ನ 12.30 ರ ಸುಮಾರಿಗೆ ನನ್ನನ್ನು ಕರೆದು ತಮಗೆ ಬಂದ ಮಾಹಿತಿಯ ವಿಷಯ ತಿಳಿಸಿ ದಾಳಿಗೆ ತಮ್ಮ ಜೊತೆ ಬರುವಂತೆ ತಿಳಿಸಿದರು. ಆ ಪ್ರಕಾರ ನಾವು ಮದ್ಯಾಹ್ನ 12.40 ಗಂಟೆಗೆ ಠಾಣೆಯಿಂದ ಹೊರಟು 1 ಗಂಟೆಯ ಸುಮಾರಿಗೆ ಲಕ್ಕವಳ್ಳಿ ಕ್ರಾಸ್ ಹತ್ತಿರ ಹೋಗಿ ಚಾಸ-2 ಮತ್ತು 3 ರವರನ್ನು ನಮ್ಮ ಜೊತೆ ಪಂಚರನ್ನಾಗಿ ಕರೆದುಕೊಂಡೆವು. ಮಾಹಿತಿ ಬಂದ ಸ್ಥಳಕ್ಕೆ 1.15 ಗಂಟೆಯ ಸಮಾರಿಗೆ ಹೋಗಿ ಕಾಯುತ್ತಾ ನಿಂತದ್ದೆವು. ಸೀತಾಪುರ ಕಾವಲು ಕ್ರಾಸ್ ಬಳಿ ಒಬ್ಬ ಆಸಾಮಿಯು ಪ್ಲಾಸ್ಟಿಕ್ ಕವರ್ನಲ್ಲಿ ಯಾವುದೋ ವಸ್ತುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡು ಬಂತು. ಕೂಡಲೇ ದಾಳಿ ಮಾಡಿದಾಗ, ಸಾರ್ವಜನಿಕರು ಓಡಿ ಹೋದರು. ವ್ಯಕ್ತಿಯನ್ನು ಹಿಡಿದು ವಿಚಾರಿಸಿದಾಗ ತನ್ನ ಹೆಸರನ್ನು ವೇಲು ಎಂದು ತಿಳಿಸಿದನು. ಆತನ ಬಳಿ ಇದ್ದ ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಮ್.ಎಲ್ನ 32 ಓಸಿ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಇದ್ದವು. ಅವುಗಳನ್ನು ಇಟ್ಟುಕೊಳ್ಳಲು ಅಥವಾ ಮಾರಾಟ ಮಾಡಲು ವ್ಯಕ್ತಿಯ ಬಳಿ ಯಾವುದೇ ಲೈಸನ್ಸ್ ಅಥವಾ ರಹದಾರಿ ಇರಲಿಲ್ಲ. ಕಾರಣ ಚಾಸ-1 ರವರು ಚಾಸ-2 ಮತ್ತು 3 ರವರ ಸಮಕ್ಷಮ ಮದ್ಯಾಹ್ನ 1.30 ರಿಂದ 2.30 ರ ಮಧ್ಯದಲ್ಲಿ ಪಂಚನಾಮೆಯನ್ನು ಜರುಗಿಸಿ ಮದ್ಯವನ್ನು ತಮ್ಮ ವಶಕ್ಕೆ ಪಡೆದುಕೊಂಡರು. ನಾವು ಹಿಡಿದುಕೊಡಂ ವ್ಯಕ್ತಿಯು ಈ ದಿನ ನ್ಯಾಯಾಲಯದ ಮುಂದೆ ಇದ್ದಾನೆ. ಮು.ಮಾ.1 ನ್ನು ನೋಡಿ ಗುರುತ್ತಿಸುತ್ತೇನೆ. ನಿಪಿ-2 ಮತ್ತು 3 ಭಾವಚಿತ್ರದಲ್ಲಿ ನಾನು ಇದ್ದೇನೆ.

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>

ಚಾಸ-2 ಮತ್ತು 3 ಇವರಿಗೆ ಚಾಸ-1 ರವರು ಕಲಂ.144 ರ ಅಡಿಯಲ್ಲಿ ನೋಟೀಸು ಕೊಟ್ಟಿದ್ದಾರೆ. ನಾವು ಆರೋಪಿಯನ್ನು ಸುಮಾರು 100 ಮೀಟರ್ ಅಂತರದಲ್ಲಿ ನಿಂತು ವಾಚ್ ಮಾಡುತ್ತಿದ್ದೆವು. ಲಕ್ಕವಳ್ಳಿ ಕ್ರಾಸ್ ಹತ್ತಿರ ಸಾಮಾನ್ಯವಾಗಿ ವಾಹನಗಳ ಓಡಾಟ ಹೆಚ್ಚು ಇರುತ್ತದೆ ಮತ್ತು ಜನಸಂಚಾರ ಕೂಡ ಇರುತ್ತದೆ ಎಂದರೆ ಸರಿ. ಆ ಸ್ಥಳವು ಕಳ್ಳತನದಿಂದ ಮದ್ಯ ಮಾರಾಟ ಮಾಡಲು ಸೂಕ್ತವಲ್ಲ ಎಂದರೆ ಸರಿಯಲ್ಲ. ಮು.ಮಾ.1 ರಂತಹ ಖಾಲಿ ಟೆಟ್ರಾ ಪ್ಯಾಕೇಟುಗಳು ಎಲ್ಲಾ ಬಾರುಗಳಲ್ಲಿ ಸಿಗುತ್ತದೆ ಎಂದರೆ ಸರಿಯಲ್ಲ. ನಾವು ಯಾವುದೇ ದಾಳಿಗೆ ಹೋಗಿಲ್ಲ, ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ, ಆರೋಪಿಯಿಂದ ಯಾವುದೇ ಮದ್ಯವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸ-1 ನನ್ನ ಮೇಲಾಧಿಕಾರಿಯೆಂದರೆ ಸರಿ. ಅವರು ಹೇಳಿದ ಹಾಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.